S.C. No. 22/2021
PW.02

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 01 ಫ್ರಾ.ಸಾ. : 02**

ಸಾಕ್ಷಿಯ ಹೆಸರು : ಜಬೀನಾಬಿ ಶೇಖ್

**ದಿನಾಂಕಃ 04-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ . ವಕೀಲರಿಂದ**

8. ನನಗೆ ಉರ್ದು ಭಾಷೆ ತಿಳಿದಿರುತ್ತದೆ. ನನ್ನ ವಿದ್ಯಾಭ್ಯಾಸ ಉರ್ದು ಹಾಗೂ ಕನ್ನಡ ಭಾಷೆಯಲ್ಲಿ ಆಗಿರುತ್ತದೆ. ನಾನು ಅಬುತಾಲೀಬ್ ಗೆ 2 ನೇ ಹೆಂಡತಿ. ಆತನ ಮೊದಲನೇ ಹೆಂಡತಿ ಜೀವಂತ ಇರುತ್ತಾರೆ ಎಂದರೆ ಸರಿ. ಆದರೆ ಆಕೆ ಅವಳ ತಾಯಿಯ ಮನೆಯಲ್ಲಿರುತ್ತಾಳೆ. ಮೃತ ಅಬುತಾಲೀಬ್ ತನ್ನ ಮೊದಲನೇ ಹೆಂಡತಿಯನ್ನು ಸೀಮೆ ಎಣ್ಣೆ ಹಾಕಿ, ಸಾಯಿಸಲು ಪ್ರಯತ್ನಿಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಈ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ನಮ್ಮ ಊರಿನಲ್ಲಿ ಬಹಳಷ್ಟು ಓಣಿಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯಿಂದ ಆರೋಪಿಯ ಮನೆ 2 ನೇ ಓಣಿಯಲ್ಲಿರುತ್ತದೆ. ನಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಬಹಳಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಅದೇ ರೀತಿ ಆರೋಪಿಯ ಮನೆಯ ಅಕ್ಕ-ಪಕ್ಕದಲ್ಲಿಯೂ ಸಹ ಬಹಳಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯಿಂದ ಚಾಸಾ-15 ರವರ ಮನೆಗೆ ಹೋಗಲು 5-10 ನಿಮಿಷಗಳ ಬೇಕಾಗುತ್ತದೆ. ಚಾಸಾ-15 ರವರ ಮನೆಯ ಅಕ್ಕ-ಪಕ್ಕದಲ್ಲಿಯೂ ಸಹ ಬಹಳಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಅಬುತಾಲೀಬ್ ಪಂಚಾಯತಿಯ ಸದಸ್ಯನಾಗಿರಲಿಲ್ಲ ಹಾಗೂ ಆತನು ಹಿರಿಯ ವ್ಯಕ್ತಿ ಆಗಿರಲಿಲ್ಲ ಎಂದರೆ ಸರಿ.

9. ನಾನು ದೂರನ್ನು ಕೊಡುವ ಸಮಯದಲ್ಲಿ ಸುಮಾರು ಜನರು ಇದ್ದರು. ಸದರಿ ದೂರಿನಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಹೇಳಿದಂತೆ ದೂರನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರಿಗೆ ನಾನು ಕರೆ ಮಾಡಿರುವುದಿಲ್ಲ. ಚಾಸಾ-14 ಹಾಗೂ ಆರೋಪಿಯ ಮನೆಗಳು ಆಜು-ಬಾಜು ಇರುತ್ತವೆ ಎಂದರೆ ಸರಿ. ಚಾಸಾ-14 ಮತ್ತು ಆರೋಪಿಯ ಮನೆಯ ಮುಂದಿನ ರಸ್ತೆ ಕಚ್ಚಾ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ಕಚ್ಚಾ ರಸ್ತೆಯಲ್ಲಿ ಕಲ್ಲುಗಳು ಇರುತ್ತವೆ ಎಂದರೆ

ಸರಿ. ಚಾಸಾ–14 ರವರ ಮನೆಯ ಕಂಪೌಂಡ ಚಿರೆ ಕಲ್ಲುಗಳಿಂದ ಕಟ್ಟಲಾಗಿದೆ ಎಂದರೆ ಸರಿ. ಚಾಸಾ–14 ರವರ ಮನೆಯ ಹಿಂದಿನ ತೋಟದಲ್ಲಿ ದಟ್ಟವಾದ ಗಿಡಗಳು ಇವೆ ಎಂದರೆ ಸರಿ. ಸದರಿ ತೋಟದಲ್ಲಿ ಯಾರಾದರೂ ಇದ್ದರೆ, ಹೊರಗಿನಿಂದ ಕಾಣುವುದಿಲ್ಲ ಎಂದರೆ ಸರಿಯಲ್ಲ.

10. ಆರೋಪಿ ಹಾಗೂ ನನ್ನ ಗಂಡನ ನಡುವೆ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿ ಹೆಣ್ಣು ಮಕ್ಕಳನ್ನು ಚುಡಾಯಿಸಿದ ಕಾರಣ, ಆತನ ಮೇಲೆ ದ್ವೇಷ ಇತ್ತು ಎಂದು ನುಡಿಯುತ್ತಾರೆ. ಆರೋಪಿಯ ದುರ್ನಡತೆಯ ವಿರುದ್ಧ ಯಾವ ಹೆಣ್ಣು ಮಕ್ಕಳು ದೂರನ್ನು ನೀಡಿಲ್ಲ ಎಂದರೆ ಸಾಕ್ಷಿಯು ಚಾಸಾ–14 ರವರು ದೂರನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡನು ಆರೋಪಿಯ ದುರ್ನಡತೆಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಆರೋಪಿಯ ದುರ್ನಡತೆಯ ಬಗ್ಗೆ ನಾನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ ಆದರೆ ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಪೊಲೀಸರ ಮುಂದೆ ಹೇಳದೆ ಇದ್ದರೂ ಸಹ ಹೇಳಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ನನ್ನ ದೂರಿನಲ್ಲಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಡೆದ ಘಟನೆಯಿಂದ ಆಘಾತವಾಗಿರುವುದರಿಂದ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ.

11. ಚಾಸಾ–10 ರವರು ನಮ್ಮ ಮನೆಗೆ ಬಂದು ಆರೋಪಿಯ ಬಗ್ಗೆ ಹೇಳಿದ ನಂತರ ನನ್ನ ಗಂಡ ಆರೋಪಿ ಮನೆಯಲ್ಲಿರುವುದರ ಬಗ್ಗೆ ವಿಚಾರಿಸಿರುತ್ತಾರೆ. ಚಾಸಾ–10 ಮತ್ತು ಚಾಸಾ–15 ರವರು ಇಬ್ಬರು ಒಟ್ಟಿಗೆ ಬಂದು, ನನ್ನ ಗಂಡನ ಬಳಿ ವಿಚಾರವನ್ನು ಹೇಳಿರುತ್ತಾರೆ. ನಾವು ಆರೋಪಿಯ ಮನೆ ಹತ್ತಿರ ಹೋದಾಗ, ಅಲ್ಲಿ ಸುಮಾರು 20–30 ಜನರು ಇದ್ದರು. ಈ ವಿಷಯವನ್ನು ಪೊಲೀಸರಿಗೆ ಹೇಳಿರುತ್ತೇವೆ. ಆರೋಪಿಯ ಮನೆಯಿಂದ ಘಟನಾ ಸ್ಥಳ ಸುಮಾರು 12 ಅಡಿ ದೂರದಲ್ಲಿರುತ್ತದೆ. ಆರೋಪಿಯ ಮನೆಯ ಮುಂದಿನ ಕಚ್ಚಾ ರಸ್ತೆಯು ಸಾರ್ವಜನಿಕರು ಓಡಾಡುವ ರಸ್ತೆ ಎಂದರೆ ಸರಿ. ಸದರಿ ರಸ್ತೆಯಿಂದ ಚಾಸಾ–14 ರವರ ಮನೆ ಕಾಣುತ್ತದೆ ಎಂದರೆ ಸರಿ. ರಸ್ತೆಯ ಮೇಲೆ ಹೋಗುವ ಜನರಿಗೆ ಆರೋಪಿಯ ಮನೆಯ ಮುಂದೆ ನಿಂತ ಜನರು ಕಾಣುತ್ತಾರೆ ಎಂದರೆ ಸರಿ.

12. ಘಟನೆಯು ಸುಮಾರು 15 ನಿಮಿಷಗಳ ಕಾಲ ನಡೆದಿರುತ್ತದೆ. ಘಟನೆ ನಡೆಯುವಾಗ ನಾನು ಘಟನೆಯನ್ನು ತಪ್ಪಿಸಲು ಹೋಗಿರುವುದಿಲ್ಲ, ಅಲ್ಲಿಯೇ ಸಮೀಪದಲ್ಲಿ ನಿಂತಿದ್ದೆನು.

ಆರೋಪಿ ಮತ್ತು ನನ್ನ ಗಂಡನ ನಡುವೆ ಆಗುತ್ತಿದ್ದ ಜಗಳವನ್ನು ತಪ್ಪಿಸಲು ಚಾಸಾ–11 ಮತ್ತು 12 ರವರು ಹೋಗಿದ್ದರು. ಸಾಮಾನ್ಯವಾಗಿ ಜಗಳವಾಗುವಾಗ, ಜನರು ತಪ್ಪಿಸಲು ಹೋಗುತ್ತಾರೆ ಎಂದರೆ ಸರಿ. ನಾವು ಆರೋಪಿಯ ಮನೆಯ ಬಳಿ ಹೋದಾಗ ಆತನ ಕೈಯಲ್ಲಿ ಚಾಕು ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ನಂತರ ಆತ ಮನೆಯ ಒಳಗೆ ಹೋಗಿ ಚಾಕುವನ್ನು ತಂದಿರುತ್ತಾನೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ನಾನು ದೂರಿನಲ್ಲಿ ಹೇಳಿರುತ್ತೇನೆ. ಆರೋಪಿಯು ತನ್ನ ಮನೆಯ ಒಳಗೆ ಹೋಗಿ ಚಾಕುವನ್ನು ತಂದಿರುತ್ತಾನೆ. ಆರೋಪಿಯ ಮನೆಯಲ್ಲಿ ಆತನ ಹೆಂಡತಿ ಹಾಗೂ ತಾಯಿ ವಾಸವಾಗಿರುತ್ತಾರೆ. ಗಲಾಟೆ ಆಗುವ ಸಮಯದಲ್ಲಿ ಅವರಾರು ಅಲ್ಲಿಗೆ ಬಂದಿರುವುದಿಲ್ಲ.

13. ನಾನು ನನ್ನ ಗಂಡನನ್ನು ಚಾಸಾ–16 ರವರ ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾನು, ನನ್ನ ಮಗ, ಚಾಸಾ–13 ರವರು ಹೋದೆವು. ಅಲ್ಲಿ ಆಸ್ಪತ್ರೆಯಲ್ಲಿ ಸುಮಾರು ಜನರು ಇದ್ದರು. ನಾವು ಆಸ್ಪತ್ರೆಗೆ ಹೋದ ನಂತರ ಸುಮಾರು ಮಧ್ಯಾಹ್ನ 2–15 ಗಂಟೆಗೆ ಪೊಲೀಸರು ಅಲ್ಲಿಗೆ ಬಂದಿರುತ್ತಾರೆ. ಪೊಲೀಸರು ಆಸ್ಪತ್ರೆಗೆ ಬಂದಾಗ ಅಲ್ಲಿ ನಮಗೆ ಪರಿಚಯ ಇದ್ದ ಜನರೂ ಸಹ ಹಾಜರಿದ್ದರು, ಆದರೆ ಅವರ ಹೆಸರು ಈಗ ನನಗೆ ನೆನಪಿಲ್ಲ. ಆರೋಪಿಗೂ ಹಾಗೂ ಚಾಸಾ–14 ರವರಿಗೂ ಆಗಾಗ ಜಗಳ ಆಗುತ್ತಿತ್ತು ಎಂದರೆ ಸರಿ. ಚಾಸಾ–14 ರವರ ಮನೆಗೆ ನಾವೆಲ್ಲರೂ ನೀರಿಗಾಗಿ ಅವರ ಮನೆಗೆ ಹೋಗುತ್ತಿದ್ದ, ಕಾರಣ ಅವರು ನಮಗೆ ಬೇಕಾದವರು ಎಂದರೆ ಸರಿಯಲ್ಲ. ಚಾಸಾ–10 ರಿಂದ 13 ರವರು ಚಾಸಾ–14 ರವರ ಸಂಬಂಧಿ ಎಂದರೆ ಸಾಕ್ಷಿಯು ಚಾಸಾ–10 ರಿಂದ 12 ರವರು ಮಾತ್ರ ಸಂಬಂಧಿಕರು, ಚಾಸಾ–13 ರವರು ಅವರ ಪಕ್ಕದ ಮನೆಯವರು ಎಂದು ನುಡಿಯುತ್ತಾರೆ. ಚಾಸಾ–17 ರವರು ನನ್ನ ಗಂಡನ ಅಣ್ಣನ ಮಗ. ಚಾಸಾ–20 ರವರು ಚಾಸಾ–10 ರವರ ಸಹೋದರ. ಚಾಸಾ–21 ರವರು ಚಾಸಾ–10 ರವರ ತಂಗಿಯ ಗಂಡ. ಚಾಸಾ–22 ರವರು ನಮ್ಮ ಊರಿನವರು. ಚಾಸಾ–23 ರವರು ನಮ್ಮ ಪಕ್ಕದ ಮನೆಯವರು. ಚಾಸಾ–24 ರವರು ನಮ್ಮ ಊರಿನವರು. ಚಾಸಾ–25 ರವರು ಚಾಸಾ–16 ರವರ ತಮ್ಮ. ಚಾಸಾ–26 ರವರು ಚಾಸಾ–22 ರವರ ಸಹೋದರ.

14. ಚಾಸಾ–14 ರವರು ರಸ್ತೆ ನಿರ್ಮಿಸಲು ಬಂದಿದ್ದ, ಜನರ ಜೊತೆ ಮಾತನಾಡುತ್ತಾ ನಿಂತಿದ್ದಕ್ಕೆ , ಆರೋಪಿ ಆಕೆಯನ್ನು ಪ್ರಶ್ನೆ ಮಾಡಿದ್ದಕ್ಕೆ ಜಗಳವಾಗಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ಚಾಸಾ–14 ರವರನ್ನು ಪ್ರತಿ ಸಲ ಪ್ರಶ್ನೆ ಮಾಡುತ್ತಿದ್ದ ಕಾರಣ, ಆಕೆಗೆ ಆರೋಪಿಯ ಮೇಲೆ ಸಿಟ್ಟು ಇತ್ತು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾರಾದರೂ ದೊಣ್ಣೆಯಿಂದ ಒಬ್ಬ ವ್ಯಕ್ತಿಗೆ ಜೋರಾಗಿ ಹೊಡೆದರೆ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನನ್ನ ಗಂಡನಿಗೆ ಸ್ವಲ್ಪ ಸಿಟ್ಟು ಜಾಸ್ತಿ ಎಂದರೆ ಸರಿಯಲ್ಲ. ನನ್ನ ಗಂಡ ಸಮಾಜ ಸೇವೆ ಮಾಡುವುದಿಲ್ಲ ಎಂದರೆ ಸಾಕ್ಷಿಯು ಯಾರಾದರೂ ಸಹಾಯ ಕೇಳಿದರೆ ಮಾಡುತ್ತಾರೆ ಎಂದು ನುಡಿಯುತ್ತಾರೆ. ಚಾಸಾ–10 ರವರು ತಮ್ಮ ಮೊಬೈಲ್ ನಲ್ಲಿ ಘಟನೆಯ ಚಿತ್ರೀಕರಣವನ್ನು ಮಾಡಿದ ವಿಚಾರ ನನಗೆ ಮರುದಿನ ತಿಳಿದು ಬಂತು ಹಾಗೂ ಈ ವಿಷಯವನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ಪೊಲೀಸರಿಗೆ ನಾನು ವಿಡಿಯೋ ತೋರಿಸಿರುವುದಿಲ್ಲ, ಚಾಸಾ–10 ರವರು ತೋರಿಸಿರುತ್ತಾರೆ. ಸದರಿ ದೃಶ್ಯಾವಳಿಯನ್ನು ಪೊಲೀಸರಿಗೆ ತೋರಿಸಲು ನಿಮಗೆ ತೊಂದರೆ ಇತ್ತಾ? ಎಂದರೆ ಸಾಕ್ಷಿಯು ಸದರಿ ದೃಶ್ಯಾವಳಿಯು ಚಾಸಾ–10 ರವರ ಮೊಬೈಲ್ ನಲ್ಲಿ ಸೇವ್ ಆಗಿತ್ತು ಎಂದು ನುಡಿಯುತ್ತಾರೆ. ಚಾಸಾ–10 ರವರು ವಿಡಿಯೋವನ್ನು ನನ್ನ ಮುಂದೆ ಪೊಲೀಸರಿಗೆ ನೀಡಿರುವುದಿಲ್ಲ, ಆದರೆ ಯಾವಾಗ ಪೊಲೀಸರಿಗೆ ನೀಡಿದರು ಎಂದು ನನಗೆ ಗೊತ್ತಿಲ್ಲ. ಚಾಸಾ–10 ರವರು ತಮ್ಮ ಮೊಬೈಲ್ ನ್ನು ಪೊಲೀಸರಿಗೆ ನೀಡುವವರಗೆ ಆತನ ಬಳಿಯೇ ಇತ್ತು.

15. ಚಾಸಾ–10 ರವರು ಯಾವುದೇ ವಿಡಿಯೋವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–10 ರವರು ಪೊಲೀಸರಿಗೆ ವಿಡಿಯೋವನ್ನು ನೀಡುವ ಮೊದಲು ನಮಗೆ ತೋರಿಸಿರುತ್ತಾನೆ. ಚಾಸಾ–15 ರವರು ಎಂದಿಗೂ ಚಾಸಾ–14 ರವರ ಮನೆಗೆ ಹೋಗಿಲ್ಲ ಹಾಗೂ ಆರೋಪಿ ಎಂದಿಗೂ ಚಾಸಾ–15 ರವರೊಂದಿಗೆ ಅಸಭ್ಯವಾಗಿ ವರ್ತಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ಚಾಸಾ–14 ಮತ್ತು 15 ರವರೊಂದಿಗೂ ಸಹ ಅಶ್ಲೀಲವಾಗಿ ಮಾತನಾಡಿಲ್ಲ ಹಾಗೂ ಅಸಭ್ಯವಾಗಿ ವರ್ತಿಸಿಲ್ಲ ಎಂದರೆ ಸರಿಯಲ್ಲ. ಚಾಸಾ–10 ಮತ್ತು 15 ರವರು ನನ್ನ ಗಂಡನ ಬಳಿ ಬಂದು ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ–14 ರವರ ಮಾತು ಕೇಳಿ, ನನ್ನ ಗಂಡನು ಆರೋಪಿಯನ್ನು ಹೊಡೆಯಲು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಆರೋಪಿಯನ್ನು ಹೊಡೆಯಲು ಮುಂದಾದಾಗ, ಆರೋಪಿ ತಾನು ತಪ್ಪಿಸಿಕೊಳ್ಳಲು, ನನ್ನ ಗಂಡನನ್ನು ದೂಡಿದ್ದರಿಂದ, ಆತ ಚೂಪಾದ ವಸ್ತುವಿನ ಬಿದ್ದು, ಆತ ಮೃತ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡನಿಗೆ ಅತಿಯಾದ ರಕ್ತ ಸ್ರಾವವಾಗಿದ್ದರಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು

ಹಾಗೂ ನನ್ನ ಮಕ್ಕಳು ನನ್ನ ಗಂಡನ ಜೊತೆ ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಮನೆಯ ಒಳಗೆ ಹೋಗಿ ಚಾಕುವನ್ನು ತಂದಿಲ್ಲ ಎಂದರೆ ಸರಿಯಲ್ಲ. ನಾನು ಹೊನ್ನಾವರ ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ–14 ರವರ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿ, ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು–2 ಚಾಕುವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು–1 ರಿಂದ 11 ಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು–11 ರಲ್ಲಿರುವ ವಿಡಿಯೋ ಆರೋಪಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು–11 ರಲ್ಲಿರುವ ವಿಡಿಯೋವನ್ನು ನಾವೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಗಂಡನಿಗೆ ಚಾಕುವನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಹೀಗೆ 20 ವರ್ಷಗಳ ಹಿಂದೆ ನನ್ನ ಗಂಡನ ಮೇಲೆ ಒಂದು ಕೊಲೆ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/–
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ